ಸಂಗತಿಗಳು ಆಗಾಗ ಚರ್ಚಿತವಾಗುತ್ತಿದ್ದವು. ಅಲ್ಲಿಯ ಮೀನುಪೇಟೆ, ಉಳಿದೆಲ್ಲೂ ಸಿಗದ ಅಪರೂಪದ ರತ್ನಗಂಬಳಿಗಳು, ಅನನ್ಯ ರುಚಿಯ ಇರಾಣೀ ಚಹಾದಿಂದ ಹಿಡಿದು ಅಲ್ಲಿಯ ಮಾದಕ ವಸ್ತುಗಳ ಮಾರುಕಟ್ಟೆ, ಬಿಂದಾಸ್ ವೇಶ್ಯಾವಾಟಿಕೆಯವರೆಗಿನ ರಂಗುರಂಗಿನ ಸಂಗತಿಗಳು ಆ ನಗರದ ಬಗೆಗಿನ ಜನರ ಕುತೂಹಲವನ್ನು ಹೆಚ್ಚಿಸಿದ್ದವು. ದೋಣಿಯಲ್ಲೂ ಕೂಡ ಅಲ್ಲಿ ತಲುಪಬಹುದೆಂದೂ, ಮೀನುಗಾರರ ದೋಸ್ತಿ ಮಾಡಿಕೊಂಡು ಅಲ್ಲಿ ಹೋಗಿ ಬಂದವರ ಪರಿಚಯ ತನಗಿದೆ ಎಂದೂ ಕೆಲವರು ಹೇಳಿಕೊಳ್ಳುತ್ತಿದ್ದರು. ಅಂತಹ ಪ್ರಯತ್ನಕ್ಕೆ ತಾವೂ ಕೈ ಹಾಕುವ ಆಲೋಚನೆಯನ್ನೂ ಮಾಡುತ್ತಿದ್ದರು. ಇನ್ನು ಕೆಲವರು ಇರಾನಿನ ವೀಸಾ ಪಡೆದು ಅಧಿಕೃತವಾಗಿಯೇ ಹಡಗಿನಲ್ಲಿ ಹೋಗಿ ಬರುವ ಸಲುವಾಗಿ ಕಸಬಾದಲ್ಲಿದ್ದ ಇರಾನಿ ಎಂಬಸಿಗೆ ಎಡತಾಕಿದ ಕಥೆಗಳೂ ಚಾಲ್ತಿಯಲ್ಲಿದ್ದವು.

ಚಂದ್ರಕಾಂತ ಕೂಡ ಒಮ್ಮೆ ತಾನೂ ಯಾಕೆ ಹೋಗಿ ಬರಬಾರದೆಂದು ಯೋಚಿಸಿದ್ದ. ಆದರೆ, ಇರಾನಿ ವೀಸಾ ಒಂದುಬಾರಿ ಪಾಸ್‌ಪೋರ್ಟಿನಲ್ಲಿ ಬಿತ್ತೆಂದರೆ ನಂತರ ಅಮೆರಿಕಾಕ್ಕೆ ಹೋಗುವುದು ಕಷ್ಟಕರ ಎಂದು ಯಾರೋ ಹೇಳಿದ್ದು ಕೇಳಿ, ಅಮೆರಿಕಾಕ್ಕೆ ಹೋಗುವ ಯಾವ ಆಲೋಚನೆ ಅವಕಾಶಗಳಿಲ್ಲದಿದ್ದರೂ, 'ಯಾಕೆ ಸುಮ್ಮನೆ ರಿಸ್ಕು' ಎಂದು ಸುಮ್ಮನಾಗಿದ್ದ.

★★★

'ಚೇತನಾ ದಿನವಿಡೀ ಒಬ್ಬಳೇ ಇರುತ್ತಾಳೆ. ಪಾಪ ಬೇಜಾರು' ಎನ್ನುವ ವಿಷಯ ಚಂದ್ರಕಾಂತನನ್ನು ಬಹಳೇ ಕಾಡುತ್ತಿತ್ತು. ತಾನಿಲ್ಲದಿದ್ದರೂ ಆಕೆಯನ್ನು ಎಂಗೇಜ್ ಇಡಲು ಹಲವು ರೀತಿಯಲ್ಲಿ ಪ್ರಯತ್ನಿಸುತ್ತಿದ್ದ. ಸಾಲದೆಂಬಂತೆ, ಹೆಂಗಸರು ಮನೆಯಲ್ಲಿ ಕೂರಬಾರದು, ಹೊರಗೆ ಹೋಗಬೇಕು, ಜನರೊಡನೆ ಬೆರೆಯಬೇಕೆಂಬುದು ಅವನ ವಾದ. ಮನೆಗೆ ಬೇಕಾಗುವ ಸಾಮಾನುಗಳನ್ನೆಲ್ಲ ಒಬ್ಬಳೇ ಹೋಗಿ ತರುವಂತೆ ಒತ್ತಾಯಿಸುತ್ತಿದ್ದ. ಚೇತನಾಳಿಗೆ ಇಂಗ್ಲಿಷು ಮಾತನಾಡಲು ಬರುತ್ತಿರಲಿಲ್ಲ. ಹಿಂದಿಯಂತೂ ಇಲ್ಲವೇ ಇಲ್ಲ. ಹೊರ ಹೋದರೆ ಜಗತ್ತಿನ ಹಲವಾರು ದೇಶದ ಮುಖಗಳ ನಡುವೆ ಅಲ್ಲಲ್ಲಿ ಭಾರತೀಯ ಮುಖಗಳು ಕಂಡರೂ ಯಾವುದೇ ರೀತಿಯ ಮಾತುಕತೆ ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಕಾರಣ ಒಬ್ಬಳೇ ಹೊರಹೋಗುವುದೆಂದರೆ ಒಂಥರಾ ಭಯ, ಅದಕ್ಕಿಂತ ಹೆಚ್ಚು ಮುಜುಗರ ಆಕೆಗೆ.

''ಮಾತನಾಡಲು ಪ್ರಯತ್ನಿಸಿದರೆ ತಾನೇ ಭಾಷೆ ಕಲಿಯಲು ಸಾಧ್ಯವಾಗುವುದು? ಹೊರಗೇ ಹೋಗೊಲ್ಲ ಎಂದರೆ ಹೇಗೆ?'' ಎಂದು ಚಂದ್ರಕಾಂತ ಅಸಮಾಧಾನಗೊಳ್ಳುತ್ತಿದ್ದ. ಅರೇಬಿಕ್ ಕಲಿಯುವ ಪುಸ್ತಕ ನೀಡಿ ದಿನಕ್ಕೆ ಹತ್ತು ಶಬ್ದ ಕಲಿಯುವಂತೆ ತಾಕೀತು ಮಾಡುತ್ತಿದ್ದ. ಬ್ಯಾಂಕಿಗೆ ಹೋಗುವ ಕೆಲಸವನ್ನು ಬೇಕಂತಲೇ ಸೃಷ್ಟಿಸಿ ಚೇತನಾಳನ್ನು ದಬ್ಬುತ್ತಿದ್ದ. ಅಂಗಡಿಗಳನ್ನು ಹೇಗಾದರೂ ನಿಭಾಯಿಸಬಲ್ಲವಳಾಗಿದ್ದರೂ; ಈ ಬ್ಯಾಂಕು ಸರಕಾರಿ ಕಚೇರಿಗಳಿಗೆ ಹೋಗುವುದೆಂದರೆ ಚೇತನಾಳಿಗೆ ಉಸಿರುಗಟ್ಟಿದಂತಾಗುತ್ತಿತ್ತು.

ನಂತರದ ದಿನಗಳಲ್ಲಿ, ಆಕೆಯೇ ಹೋಗಿ ತರಲೆಂದು ಮನೆಯ ಸಾಮಾನುಗಳನ್ನು ಚಂದ್ರಕಾಂತ ತಪ್ಪಿಯೂ ತರುತ್ತಿರಲಿಲ್ಲ. ಆಕೆಯ ಜೊತೆಗಿನ ಹೊರಗಿನ ಸುತ್ತಾಟವೆಂದರೆ ಪಾರ್ಕು ಬೀಚುಗಳಿಗೆ ಮಾತ್ರ ಸೀಮಿತವಾಗಿಸಿಬಿಟ್ಟ. ತಾನೇ ಹೋಗಬೇಕಾದ ಅನಿವಾರ್ಯತೆಯಲ್ಲಿ ಚೇತನಾ ಎರಡು ವಾರಕ್ಕೆ ಬೇಕಾದ ಸಾಮಾನುಗಳನ್ನೆಲ್ಲಾ ಒಟ್ಟಿಗೇ ತಂದುಕೊಂಡರೆ ಅದಕ್ಕೂ ತಗಾದೆ ತೆಗೆಯುತ್ತಿದ್ದ. ''ಹೊರಹೋಗುವುದನ್ನು ತಪ್ಪಿಸಿಕೊಳ್ಳಲೆಂದೇ ಒಮ್ಮೆಲೇ ತರುತ್ತೀಯಾ. ದಿನಾ ಹೋಗಿ ಒಂದೆರಡು ಸಾಮಾನುಗಳನ್ನಷ್ಟೇ ತರಬಾರದೇ? ನಿನ್ನ ಒಳಿತಿಗೇ ಹೇಳುತ್ತಿದ್ದೇನೆ'' ಎನ್ನುತ್ತಿದ್ದ.